(SRI KADIDAL MANJAPPA)

Rs. 30,000 being crop compensation payable to the atchkatdars of 250 acres of land under the tank.

ಶ್ರೀ ಎಸ್. ಆರ್. ರಾಮಯ್ಯ.—ಈ ಕೆರೆಯಿಂದ ನಾಗುವಂಗೆ ನೀರನ್ನು ಕೊಡದೆ ನಿಲ್ಲಿಸಿರುವುದು ಎಷ್ಟು ವರ್ಷಗಳಿಂದ ?

ಶ್ರೀ ಕಡಿದಾಳ್ ಮಂಜಪ್ಪ.—1947 ನೆಯ ಇಸವಿಯಲ್ಲಿ ಡಿಫೆನ್ಸ್ ಇರಾಖೆಯವರು ಈ ಕೆರೆಯನ್ನು ಸ್ವಾಧೀನಕ್ಕೆ ತೆಗೆದುಕೊಂಡರು. 1947ರ ನಂತರ 250 ಎಕರೆ ಪ್ರದೇಶಕ್ಕೆ ನೀರನ್ನು ಒದಗಿಸುತ್ತಿದ್ದಾರೆ. ಇತ್ತೀಚೆಗೆ ಡಿಫೆನ್ಸ್ ಇರಾಖೆಯವರು ಟೆಲಿಫೋನ್ ಇಂಡಸ್ಟ್ರಿಯವರಿಗೆ ನೀರನ್ನು ಕೊಡುತ್ತಿದ್ದಾರೆ.

ಶ್ರೀ ಎಸ್. ಆರ್. ರಾಮಯ್ಯ.—ಹಣ ಡಿಪಾಜಿಟ್ ಮಾಡಿ ಎಷ್ಟು ವರ್ಷವಾಯಿತು?

ಶ್ರೀ ಕಡಿದಾಳ್ ಮಂಜಪ್ಪ.—250 ಎಕರೆ ಏನಾ ಉಳಿದ ಪ್ರದೇಶಕ್ಕೆ ಕ್ರಾಪ್ ಕಾಂಪೆಕ್ಸೇಷನ್ 1947 ರಿಂದ ಕೊಡುತ್ತಿದ್ದಾರೆ.

ಶ್ರೀ ಎಸ್. ಆರ್. ರಾಮಯ್ಯ.—ಈ ಹಣವೇ ನಾದರೂ ಹಂಚಿಕೆಯಾಗಿದೆಯೇ ?

Sri KADIDAL MANJAPPA.—I want notice.

ಶ್ರೀ ಜಿ. ಎಸ್. ಪುಟ್ಟಣ್ಣ.—250 ಎಕರೆ ಜಮೀನು ಫನಲು ಹೋಗುತ್ತದೆಂದು ಗೊತ್ತಾಗಿದೆ. ಅವರಿಗೆ ನೀರು ಸಾಲುವುದಿಲ್ಲ. ಆ ಅಚ್ಚುಕಟ್ಟನ್ನು ಉತ್ತಮ ಗೊಳಿಸುವುದಕ್ಕೆ ಸಾಧ್ಯವಾಗುತ್ತದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಕೆರೆ ಉತ್ತಮ ಪಡಿಸಿದರೆ ಅಚ್ಚುಕಟ್ಟಿಗೆ ಅನುಕೂಲವಾಗುತ್ತದೆ, ಇಲ್ಲದಿದ್ದರೆ ಆಗುವುದಿಲ್ಲ ಎಂದು ಊಹೆ ಮಾಡಬಹುದು.

Construction of Jambukere feeder channel in Hunsanahalli, Bangarpet Taluk.

Q.—1103. Sri E. NARAYANA GOWDA (Bangarpet).—

Will the Government be pleased to state :—

(*a*) the reasons for not according sanction to the construction of Jambukere feeder channel in Hunasanahalli, Bangarpet Taluk, in spite of receipt of relevant papers thirteen years ago ;

(*b*) the period required to complete the said work ?

A.—Sri H. M. CHANNABASAPPA (Minister for Public Works and Electricity).—

(*a*) The estimate has not so far been received by Government. The matter has, however, been under the examination in the Department continuously since 1952 and estimate is being finalised.

(*b*) This can be indicated only after the estimate is finalised and sanctioned.

ಶ್ರೀ ಇ. ನಾರಾಯಣಗೌಡ.—1952 ರಿಂದೀಚೆಗೆ ಎಂದರೆ, ಆರು ವರ್ಷಗಳಿಂದ ಇದು ಅವಿಚ್ಛಿನ್ನವಾದ ಪರಿಶೀಲನೆಯಲ್ಲಿದೆಯೆಂದು ಹೇಳುತ್ತಿದ್ದೀರಿ. ಅಷ್ಟೆರಾಗಿ ಪೂರ್ಣವಾಗಬೇಕಾದರೆ ಎಷ್ಟು ದಿವಸಗಳಾಗಬೇಕು ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ವರ್ಷ ಆಗುತ್ತದೆ.

ಶ್ರೀ ಇ. ನಾರಾಯಣಗೌಡ.—ಈ ತಿಂಗಳು 24 ನೆಯ ತಾರೀಖು ಇದಕ್ಕೆ ಟೆಂಡರು ಕರೆದಿದ್ದಾರೆ. ಹಾಗಿರುವಾಗ ಇದು ಪರಿಶೀಲನೆಯಲ್ಲಿದೆಯೆಂದು ಹೇಳುತ್ತಿದ್ದೀರಿ.

Sri H. M. CHANNABASAPPA.—I am very glad the Hon'ble Member knows the position.

Completion of Nittur-Turuvekere Road in Tumkur District.

Q.—1312. Sri G. N. PUTTANNA (Tumkur).—

Will the Government be pleased to state :—

(*a*) the amount of grant sanctioned to the road from Nittur to Turuvekere in Tumkur District ;

(*b*) whether it is a fact that the sanctioned amount for the construction of the said road has lapsed ;

(*c*) if so, the total amount so lapsed ;

(*d*) whether they would direct the concerned authorities to take up and complete the work early ?

A.—Sri H. M. CHANNABASAPPA (Minister for Public Works and Electricity).—

(*a*) The grants allotted are as follows :—

Year	*Grant in Rupees*
1955-56	70,000
1956-57	70,000
1957-58	50,000

(*b*) A portion of the allotment each year has remained unutilised.

(*c*) Rs. 1,69,531 (up to 1957-58).

(*d*) Yes.

ಶ್ರೀ ಜಿ. ಎಸ್. ಪುಟ್ಟಣ್ಣ.—ಈ ರಸ್ತೆ ಯಾವ ವರ್ಷ ಮಂಜೂರಾಗಿದೆ ?

*ಶ್ರೀ ಎಚ್. ಎಂ. ಚನ್ನಬಸಪ್ಪ.—1956ನೇ ಇಸವಿ ಮೇ 28ರಲ್ಲಿ.

ಶ್ರೀ ಜಿ. ಎಸ್. ಪುಟ್ಟಣ್ಣ.—ಇದಕ್ಕೆ ಪೂರ್ತಿ ಕೇಂದ್ರ ಸರ್ಕಾರದ ಗ್ರಾಂಟ್ ಇದೆಯೋ ಅಥವಾ ಮೈಸೂರು ಸರ್ಕಾರದ ಗ್ರಾಂಟೂ ಇದೆಯೋ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮೈನೂರು ಸರ್ಕಾರ ಐದನೆಯ ಒಂದು ಭಾಗವಹಿಸುತ್ತದೆ, ಬಾಕಿಯಾದದ್ದು ಕೇಂದ್ರ ಸರ್ಕಾರಕ್ಕೆ ಸೇರಿದ್ದು.

ಶ್ರೀ ಜಿ. ಎಸ್. ಪುಟ್ಟಣ್ಣ.—(c)ಗೆ ಉತ್ತರವಾಗಿ 1,69,531 ರೂಪಾಯಿ ಲ್ಯಾಪ್ಸ್ ಆಗಿದೆ ಎಂದು ಹೇಳುತ್ತೀರಿ ಕಾರಣವೇನು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಲ್ಲಿ ರಸ್ತೆ ಮಾಡಲು ಭೂಮಿ ಅಕ್ವೈರ್ ಮಾಡಿಕೊಳ್ಳುವುದಕ್ಕೆ ಜನಗಳು ತೊಂದರೆಮಾಡಿದ್ದರಿಂದ ಕೆಲಸ ನಿಂತಿದೆ.

ಶ್ರೀ ಜಿ. ಎಸ್. ಪುಟ್ಟಣ್ಣ.—ಜಾಗ್ರತೆ ಭೂಮಿ ಅಕ್ವೈರ್ ಮಾಡಿಕೊಳ್ಳಲು ಅವಕಾಶ ಮಾಡಿಕೊಡುತ್ತೀರಾ, ದಯವಿಟ್ಟು ರಸ್ತೆ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಭೂಮಿಯನ್ನು ಸರ್ಕಾರದವರ ವಶಕ್ಕೆ ಕೊಟ್ಟಪಕ್ಷದಲ್ಲಿ ತಕ್ಷಣ ಕೆಲಸ ಶುರುಮಾಡಿಸಿ ಎಷ್ಟು ಸಾಧ್ಯವೋ ಅಷ್ಟುಬೇಗ ಮಾಡಿಸುತ್ತೇವೆ.

Additional supply of water taps in Ramanathapur, Arkalgud Taluk.

Q.—1492. Sri PUTTE GOWDA (Arkalgud).—

Will the Government be pleased to state :—

(*a*) when were pipes laid in Ramanathapur, Arkalgud Taluk, Hassan District, under the Rural Water Supply Scheme ;

(*b*) the number of water taps provided in that place ;

(*c*) whether they are aware of the inconvenience caused to the public for want of sufficient water taps in that place ;

(*d*) the steps they propose to take to avoid the inconvenience to the people ?

A.—Sri H. M. CHANNABASAPPA (Minister for Public Works and Electricity).—

(*a*) During November 1956.

(*b*) Five.

(*c*) Yes.

(*d*) A supplemental estimate amounting to Rs. 29,370 for providing water supply to other parts of the town, has been included in the third batch of estimates under National Water Supply Schemes. The work will be taken up after the scheme receives sanction of the Government of India.

ಶ್ರೀ ಪುಟ್ಟೇಗೌಡ.—(b)ಗೆ ಉತ್ತರವಾಗಿ ಐದು ನಲ್ಲಿಗಳನ್ನು ಹಾಕಿಸಿದೆ ಎಂದುಹೇಳಿದ್ದೀರಿ. ಮೊದಲು ಎಷ್ಟು ನಲ್ಲಿಗಳನ್ನು ಹಾಕಿಸಬೇಕೆಂದು ಎಸ್ಟಿಮೇಟ್ ಆಗಿತ್ತು ?

*ಶ್ರೀ ಎಚ್. ಎಂ. ಚನ್ನಬಸಪ್ಪ.—17 ಸಾವಿರ ರೂಪಾಯಿಗಳಿಗೆ ಮೊದಲು ಅಂದಾಜು ಮಾಡಿತ್ತು. ಈ ಊರು ಎರಡು ಭಾಗವಾಗಿರುವುದರಿಂದ ಅಂದಾಜಿನ ದುಡ್ಡು ಎಷ್ಟಿತ್ತೋ ಅಷ್ಟು ಕೆಲಸ ಮಾಡಿದರು; ಬಾಕಿ ಕಡೆ ನಿಲ್ಲಿಸಿದರು.

ಶ್ರೀ ಪುಟ್ಟೇಗೌಡ.—ಮುಂದೆ ಎಷ್ಟು ಕೆಲಸ ಮಾಡಬೇಕೆಂದು ಅಂದಾಜು ಇದೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—29,370 ರೂಪಾಯಿಗಳ ಅಂದಾಜು ಬಂದಿದೆ, ಅದು ಮುಂಜೂರಾದಮೇಲೆ ಬಾಕಿ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ಜಿ. ನರಸಿಂಹೇಗೌಡ.—ಒಂದುಸಾರಿ ರೂರರ್ ವಾಟರ್ ಸಪ್ಲೈ ಹೆಡ್‌ನಿಂದ ಹಣ ಕೊಟ್ಟ ಮೇಲೆ ಮತ್ತೆ ಪುನಃ ಯಾವ ಫಂಡ್‌ನಿಂದ ಹಣ ಕೊಡುತ್ತೀರಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದೇ ಹೆಡ್‌ನಲ್ಲಿ ಕೊಡುತ್ತೇವೆ.

Sanction of Increments to the N.G.Os.

Q.—1598. Sri T. PARTHASARATHY (Malleswaram).—

Will the Government be pleased to state :—

(*a*) whether any Government Order has been issued regarding grant of increments to N.G.Os of old Mysore without insisting upon the Departmental Tests, and whether this benefit has been extended to all the officials of all the Departments from 1st January 1957;

(*b*) whether there are any officials in the Revenue Department who have not been given this Concession ;

(*c*) whether there are any officials in the Revenue Department who have put in more than ten years of service but still drawing the minimum of the grade ;

(*d*) the reasons for this discrimination ?

A.—Sri B. D. JATTI (Chief Minister).—

(*a*) Yes.

(*b*) No.

(*c*) No.

(*d*) Does not arise.

Sri T. PARTHASARATHY.—Will the Chief Minister assure me that he will get matters referred to in (*b*) and (*c*) re-investigated and if there are any persons who are not given concessions that they would be given the concessions ?